ವೈದ್ಯಕೀಯ ಖಾತೆಯ ಅಮಲದಾರರಿಗೆ ಸೂಚನೆಗಳು.

(೧) ಯಾವತ್ತು ವೈದ್ಯಕೀಯ ಅಮಲದಾರರು ಮತ್ತು, ವಿಶೇಷವಾಗಿ, ಸಿಬ್ಬಿಲ ಸರ್ಜನರ ಹುದ್ದೆಗಳನ್ನು ಧಾರಣ ಮಾಡುವವರು, ವೈದ್ಯಕೀಯ ಸಹಾಯ, ರೋಗದ ನಿವಾರಣೆ ಮತ್ತು ಸಾಮಾನ್ಯವಾಗಿ ಸಾರ್ವಜನಿಕ ಆರೋಗ್ಯ, ಇವುಗಳಿಗೆ ಪ್ರತ್ಯಕ್ಷವಾಗಿ ಅಥವಾ ಅಪ್ರತ್ಯಕ್ಷವಾಗಿ ಸಂಬಂಧಿಸಿದ ಯಾವತ್ತು ಬಾಬತುಗಳ ವಿಷಯದಲ್ಲಿ ಗ್ರಾಮನಿವಾಸಿಗಳ ಕಲ್ಯಾಣದ ಬಗ್ಗೆ ಮಾಡಲ್ಪಡುವ ಯಾವತ್ತು ಪ್ರಯತ್ನಗಳಲ್ಲಿ ಪ್ರತ್ಯಕ್ಷ ಭಾಗವನ್ನು ವಹಿಸಬೇಕು.

(೨) ಯಾವತ್ತು ವೈದ್ಯಕೀಯ ಅಮಲದಾರರು, ಇಂಡಿಯನ್ ರೆಡ್-ಕ್ರಾಸ ಸೊಸಾಯಟಿಯ ಸ್ಥಾನಿಕ ಶಾಖೆಗಳ, ಮತ್ತು ಗ್ರಾಮಸುಧಾರಣೆಯ ಕೆಲಸಕ್ಕೆ ಸಂಬಂಧಪಟ್ಟ ಎಲ್ಲ ಕಮಿಟಿಗಳ ಮತ್ತು ಸಂಸ್ಥೆಗಳ ಸಭಾಸದರಾಗಬೇಕು, ಮತ್ತು ಯಾವತ್ತು ಸಭೆಗಳಲ್ಲಿ ನಿಯಮಿತತನದಿಂದ ಹಾಜರಾಗುವಂತೆಯೂ, ವೈದ್ಯಕೀಯ ಸಹಾಯ, ರೋಗದ ನಿವಾರಣೆ ಮತ್ತು ಸಾರ್ವಜನಿಕ ಆರೋಗ್ಯ, ಇವುಗಳ ವಿಷಯದಲ್ಲಿ ತಮ್ಮ ತಜ್ಞ ಜ್ಞಾನ ಮತ್ತು ಅನುಭವಗಳು ಉಪಯುಕ್ತವಾಗುವಂಥ ಗ್ರಾಮಸುಧಾರಣೆಯ ಕೆಲಸಗಳಲ್ಲಿ ನಿಜವಾಗಿ ಪ್ರತ್ಯಕ್ಷ ಭಾಗವನ್ನು ವಹಿಸುವಂತೆಯೂ ವಿಶೇಷವಾಗಿ ನೋಡಿಕೊಳ್ಳಬೇಕು.

(೩) ಔಷಧಾಲಯಗಳು ವಶದಲ್ಲಿರುವ ಎಲ್ಲ ವೈದ್ಯಕೀಯ ಅಮಲದಾರರು, ತಮ್ಮ ಸಮೀಪದ ಹಳ್ಳಿಗಳಲ್ಲಿ ವಾಸಿಸುವ ಜನರ ವೈದ್ಯಕೀಯ ಮತ್ತು ಸಾರ್ವಜನಿಕ ಆರೋಗ್ಯದ ವಿಷಯದಲ್ಲಿ ವಿಶೇಷ ಮನಸ್ಸು ಹಾಕಬೇಕು. ಅವರು, ವೈದ್ಯಕೀಯ ಸಹಾಯಕ್ಕೆ, ಸಾಮಾನ್ಯ ಸಾರ್ವಜನಿಕ ಆರೋಗ್ಯಕ್ಕೆ ಮತ್ತು ನಿವಾರಕ ಔಷಧಗಳಿಗೆ ಸಂಬಂಧಿಸಿದ ಯಾವತ್ತು ಬಾಬತುಗಳಲ್ಲಿ ಗ್ರಾಮನಿವಾಸಿಗಳಿಗೆ ಅಥವಾ ಅವರ ಪ್ರತಿನಿಧಿಗಳಿಗೆ ಪ್ರತ್ಯಕ್ಷ ಸಹಾಯವನ್ನು ಮತ್ತು ಆಲೋಚನೆಯನ್ನು ಪುಕ್ಕಟೆಯಾಗಿ ಮತ್ತು ಸಂಪೂರ್ಣವಾಗಿ ಕೊಡಲಿಕ್ಕೆ ಯಾವಾಗಲೂ ಸಿದ್ಧರಾಗಿರಬೇಕು. ಅವರು, ಶಾಲೆಯ ವಿದ್ಯಾರ್ಥಿಗಳ ತಾಯಿತಂದೆಗಳಿಗೆ, ತಮ್ಮ ಮಕ್ಕಳನ್ನು ಕಾಲ ಕಾಲಕ್ಕೆ ವೈದ್ಯಕೀಯ ತಪಾಸಣೆಯ ಬಗ್ಗೆ ಔಷಧಾಲಯಕ್ಕೆ ತರಲಿಕ್ಕೆ ಉತ್ತೇಜನ ಕೊಡಬೇಕು ಮತ್ತು ಇಂಥ ತಪಾಸಣೆಯನ್ನು ಸಂಪೂರ್ಣವಾಗಿಯೂ ಮನಃಪೂರ್ವಕವಾಗಿಯೂ ಮಾಡಬೇಕು.

ಪಿಡುಗು ರೋಗಗಳು ತಲೆದೋರಿದಾಗ, ಮತ್ತು ಸಾಂಸರ್ಗಿಕ ರೋಗಗಳು ಉಂಟಾದಾಗ, ಅವರು, ತಮ್ಮ ಉದಾಹರಣೆಯಿಂದ ಮತ್ತು ಅವುಗಳು ಹಬ್ಬುವದನ್ನು ಹ್ಯಾಗೆ ಉತ್ತಮವಾಗಿ ತಪ್ಪಿಸಬೇಕೆಂಬ ಬಗ್ಗೆ ಆಲೋಚನೆ ಹೇಳಿ ಇಂಥ ರೋಗಗಳನ್ನು ನಿರ್ಬಂಧನೆಯಲ್ಲಿಡುವದಕ್ಕೆ ಸಹಾಯ ಮಾಡುವದರಲ್ಲಿ ಪ್ರತ್ಯಕ್ಷ ಭಾಗವನ್ನು ವಹಿಸಬೇಕು. ವಿಶೇಷವಾಗಿ, ನಿವಾರಿಸಲಿಕ್ಕೆ ಶಕ್ಯವಿರುವದೆಂದು ಕಂಡುಬಂದ ಅಥವಾ ಸ್ಪರ್ಶಜನ್ಯವಾದ ಕಣ್ಣುಬೇನೆಯು ಗ್ರಾಮನಿವಾಸಿಗಳಲ್ಲಿ ಉಂಟಾದ ಯಾವತ್ತು ಬಾಬತುಗಳಲ್ಲಿ, ಮತ್ತು ಗ್ರಾಮಗಳಲ್ಲಿ ಪರಿಚಾರಕರ ಅಜಾಗ್ರತೆಯಿಂದ ನಂಜು ಆಗಿತ್ತೆಂದು ನಂಬಲಿಕ್ಕೆ ಚಲೋ ಕಾರಣವಿರುವಂಥ ಬಾಳಂತಿತನದಿಂದ ಉಂಟಾದ ಮರಣಗಳ ಮತ್ತು ಪ್ರಸೂತಿಯ ಕಾಲಕ್ಕೆ ಉಂಟಾದ ರೋಗಗಳ ಯಾವತ್ತು ಬಾಬತುಗಳಲ್ಲಿ, ವೈದ್ಯಕೀಯ ಅಮಲದಾರರು, ಇಂಥ ರೋಗವು

ಸಂಸರ್ಗದಿಂದ ಹ್ಯಾಗೆ ಉಂಟಾಯಿತೆಂಬದನ್ನು ಮತ್ತು ಪ್ರಸೂತಿಯ ಬಾಬತಿನಲ್ಲಿ, ನಿಸರ್ಗದ ಪದ್ಧತಿಗಳಲ್ಲಿ ಅನಾವಶ್ಯಕವಾಗಿ ಕೈಹಾಕಿದ್ದರಿಂದ ಮತ್ತು ಅಪಾಯ ಕಾರಕ ಸೂಲಗಿತ್ತಿತನದಿಂದ ಬೇನೆಯು ಹ್ಯಾಗೆ ಉಂಟಾಯಿತೆಂಬದನ್ನು ಆಪ್ತೇಷ್ಟರಿಗೆ ತಿಳಿಸಿ ಹೇಳಲಿಕ್ಕೆ ವಿಶೇಷ ಕಾಳಜಿ ತೆಗೆದುಕೊಳ್ಳಬೇಕು.

(೪) ದೇಶೀ ಸೂಲಗಿತ್ತಿಯರಿಗೆ ತಮ್ಮ ಕೆಲಸಗಳನ್ನು ಮಾಡತಕ್ಕ ಯೋಗ್ಯವಾದ ಪದ್ಧತಿಗಳ ಸಂಬಂಧದಿಂದ ಶಿಕ್ಷಣ ಕೊಡುವದಕ್ಕೆ ಮಾಡಲ್ಪಡುವ ಯಾವತ್ತು ಪ್ರಯತ್ನಗಳಲ್ಲಿ ವೈದ್ಯಕೀಯ ಅಮಲದಾರರು ಯಾವಾಗಲೂ ಪ್ರತ್ಯಕ್ಷವಾಗಿ ಮನಸ್ಸು ಹಾಕತಕ್ಕದ್ದು.